# ಸಮಾಜಕ್ಕೆ ಬೇಕಿದೆ ಮಾನವೀಯತೆಯ ಬೆಳಕು





‘ಕಿರೀಟವನ್ನು ತೊಟ್ಟ ಶಿರ ಭಾರವಾಗಿರುತ್ತದೆ’ (Heavy is the head that wears the crown) ಎಂಬ ಮಾತಿನಂತೆ ಹಲವು ವೈಶಿಷ್ಟ್ಯಗಳನ್ನು ಹೊಂದಿರುವ ನಮ್ಮ ದೇಶವೂ ಆರ್ಥಿಕ ಅಸಮಾನತೆ, ರಾಜಕೀಯ ಪ್ರಕ್ಷುಬ್ಧತೆ ಹಾಗೂ ಹಲವು ರೀತಿಯ ಸಮಸ್ಯೆಗಳ ಭಾರ ಹೊತ್ತಿದೆ. ಹಾಗೇ ನಾಯಕತ್ವದ ಜವಾಬ್ದಾರಿಯನ್ನೂ ಈ ವಾಕ್ಯ ಸೂಚಿಸುತ್ತದೆ.

ಸಾಮಾಜಿಕ ವ್ಯವಸ್ಥೆ ಆಗಾಗ್ಗೆ ಪರಿಷ್ಕೃತಗೊಳ್ಳುತ್ತಿರುತ್ತದೆ. ಆದರೆ ಗಡಿಯಾರದ ಮುಳ್ಳು ಮತ್ತೆ ಅದೇ ಸ್ಥಳದಲ್ಲಿ ಬಂದು ನಿಂತಂತೆ ಯುದ್ಧಗಳು ಮರುಕಳಿಸುತ್ತಿವೆ. ಯುದ್ಧದ ವಿನಾಶಕಾರಿ ಪರಿಣಾಮಗಳಿಂದ ಹೊರಬರಲು, ಶಾಂತಿ ಹಾಗೂ ಸುವ್ಯವಸ್ಥೆಯ ಕನಸಿನಲ್ಲಿ ಜನ್ಮ ತಳೆದ ಅಹಿಂಸೆ, ಸೇವೆ, ಸತ್ಯ ಹಾಗೂ ಸ್ವರಾಜ್ಯದ ತತ್ವಗಳು ಈಗಿನ ಸಂದರ್ಭದಲ್ಲೂ ಹೆಚ್ಚೇ ಅಗತ್ಯ ಎನಿಸುತ್ತಿವೆ. ಈ ತತ್ವಗಳನ್ನು ಪ್ರತಿಪಾದಿಸಿದ ಗಾಂಧೀಜಿಯವರ ಚಿಂತನೆಗಳು ಹಿಂದೆಂದಿಗಿಂತಲೂ ಈ ಸಮಾಜದಲ್ಲಿ ಹೆಚ್ಚು ಅವಶ್ಯಕ ಎನಿಸುತ್ತಿದೆ.

ಕಾಲಚಕ್ರ ಉರುಳಿದರೂ ಅದರಿಂದ ಕಲಿಯಬೇಕಾದ ಮೌಲ್ಯಗಳು ಹಲವು. ಗಾಂಧಿಯವರ ಆದರ್ಶವಾದಗಳು, ಆಶಯಗಳು ಈಗಿನ ಸಮಾಜದ ಮರುನಿರ್ಮಾಣಕ್ಕೆ ನೆಲೆಗಟ್ಟಾಗಬೇಕಿವೆ. ಸಾಮಾಜಿಕ ಶ್ರೇಣಿಗಳ ನಿರ್ಮೂಲನೆ, ನಿಸ್ವಾರ್ಥ ಸೇವೆ, ಬದ್ಧತೆ ಎಂಬುದು ಯಾರೂ ಪಾಲಿಸಲಾಗದ ಆದರ್ಶಗಳೇನಲ್ಲ. ಈ ನಿಟ್ಟಿನಲ್ಲಿ ಗಾಂಧಿ ಚಿಂತನೆಗಳು ಪ್ರತಿನಿತ್ಯವೂ ನಮ್ಮನ್ನು ಒಳಗೊಳ್ಳಬೇಕಿದೆ.

ಪ್ರಾಯೋಗಿಕವಾಗಿ ಗಾಂಧಿವಾದ ನಮ್ಮ ಸಮಾಜದಲ್ಲಿ ಮದ್ದಿನಂತೆ ಕೆಲಸ ಮಾಡಬಲ್ಲದು. ಸಾಮಾಜಿಕ ಸಮಸ್ಯೆಯನ್ನು ತಡೆಗಟ್ಟುವ ಜೊತೆಗೆ ಯಾವುದೇ ಅಸಮಾನತೆಯನ್ನು ವಿರೋಧಿಸುವಷ್ಟು ಬಲಿಷ್ಠ ಸಮಾಜವನ್ನು ರೂಪಿಸಲು ಅಹಿಂಸೆ, ಪ್ರಾಮಾಣಿಕತೆಯ ಔಷಧ ಯಾವ ಕಾಲಕ್ಕೂ ಬೇಕೇಬೇಕು. ಶಾಂತಿ, ಸೌಹಾರ್ದ, ಸಮಾನತೆ ಹಾಗೂ ಆಡಳಿತದ ಚೌಕಟ್ಟನ್ನು ಒದಗಿಸಿಕೊಡುವ ಗಾಂಧಿವಾದ ಯಾವುದೇ ಆರೋಗ್ಯಕರ ಸಮಾಜಕ್ಕೂ ಅಗತ್ಯವೇ. ಆದರೆ ಒಂದು ಮಿತಿಯನ್ನು ನಿರಾಕರಿಸಲಾಗದು. ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿರುವ ಈ ಸಂದರ್ಭದಲ್ಲಿ ಅಹಿಂಸೆಯ ತತ್ವ ತನ್ನ ಗಟ್ಟಿತನವನ್ನು ಕಳೆದುಕೊಳ್ಳುತ್ತಿದೆ. ಪ್ರತೀಕಾರ ಅನಿವಾರ್ಯ ಎಂಬ ಭಾವ ಸೃಷ್ಟಿಯಾಗುತ್ತಿದೆ. ಆದರೆ ಗಾಂಧಿಮೌಲ್ಯಗಳನ್ನು ಅನುಸರಿಸಬೇಕಾದ್ದು ಈ ಪೀಳಿಗೆಯ ಜವಾಬ್ದಾರಿಯೂ ಆಗಿದೆ. ಗಾಂಧಿವಾದವನ್ನು ತ್ಯಜಿಸುವುದು ಎಂದರೆ ಸಂಘರ್ಷವನ್ನು ಒಪ್ಪಿಕೊಂಡಂತೆ. ಅದನ್ನು ಅಪ್ಪಿಕೊಳ್ಳುವುದು ಎಂದರೆ, ಮಾನವೀಯತೆಯ ದೀಪ ಹಚ್ಚಿದಂತೆ.

**–ನಿಹಾರಿಕಾ ನೇವಾಸ್ಕರ್**, ವಿದ್ಯಾರ್ಥಿನಿ, ಕ್ರೈಸ್ಟ್ ವಿಶ್ವವಿದ್ಯಾಲಯ

# ಚಿಗುರಲಿ ‘ಗಾಂಧಿ ಮನಗಳು’



**ಗಾಂ**ಧಿವಾದವನ್ನು ಮೆಚ್ಚುವವರು, ಅವರ ತತ್ವಗಳನ್ನು ಉಲ್ಲೇಖಿಸುವವರು ಹಲವರು. ಆದರೆ ಪ್ರಾಮಾಣಿಕವಾಗಿ ಅನುಸರಿಸುವ ಮಂದಿ ಬಹಳ ಕಡಿಮೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ವೇಗವಾಗಿ ಓಡುತ್ತಿರುವವರ ಈ ಲೋಕದಲ್ಲಿ ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಸಹಬಾಳ್ವೆಯಂಥ ಮೌಲ್ಯಗಳು ಗೌಣವಾಗಿವೆ. ಆದರೆ ಓಡುವುದಾದರೂ ಎಲ್ಲಿಗೆ? ಪಕ್ಕದಲ್ಲಿದ್ದವರನ್ನೂ ಹಿಂದೆ ನೂಕಿ ಓಡುವ ಉದ್ದೇಶವಾದರೂ ಏನು? ಇದರಿಂದ ಸಾಧಿಸುವುದಾದರೂ ಏನು? ಕೊನೆಗೆ ಉಳಿಯುವುದು ಏನು?

ಈ ಎಲ್ಲ ಪ್ರಶ್ನೆಗಳಲ್ಲಿಯೇ ಬದುಕಿನ ಸಾರ ಅಡಗಿದೆ. ಸಮಾಜದಲ್ಲಿ ಹಿಂದುಳಿದವರನ್ನು, ಅನ್ಯಾಯಕ್ಕೆ ಒಳಗಾದವರನ್ನು ಮುಂದೆ ತರಲೆಂದೇ ಅಲ್ಲವೇ ಗಾಂಧೀಜಿಯವರು ಶ್ರಮಿಸಿದ್ದು? ಅಸಮಾನತೆಯೇ ಹೆಚ್ಚಾಗಿರುವ ಈಗಿನ ಸಮಾಜಕ್ಕೆ ಇಂಥ ಹೃದಯಗಳು ಬೇಕಾಗಿವೆ.

ವೈವಿಧ್ಯ ಸಂಸ್ಕೃತಿಯನ್ನು ಹೊಂದಿರುವ ಈ ಸಮಾಜದಲ್ಲಿ ಗಾಂಧಿಯವರ ಆಲೋಚನೆಗಳನ್ನು, ಆದರ್ಶಗಳನ್ನು ಮರುವ್ಯಾಖ್ಯಾನಿಸುವುದು ನಿಜಕ್ಕೂ ಮುಖ್ಯವಾಗಿದೆ. ಈ ಕಾಲಘಟ್ಟದಲ್ಲಿ ಎದುರಾಗುತ್ತಿರುವ ಸಮಸ್ಯೆಗಳಿಗೆ ಅವರ ಸಿದ್ಧಾಂತದ ಮೂಲಕವೇ ಉತ್ತರ ಕೊಡಬೇಕಿದೆ. ನಮ್ಮ ಸಮಾಜದ ಭವಿಷ್ಯವನ್ನು ಹೆಚ್ಚು ಮಾನವೀಯ ಹಾಗೂ ಸುಸ್ಥಿರಗೊಳಿಸಲು ಗಾಂಧಿಮೌಲ್ಯದ ಮರುವ್ಯಾಖ್ಯಾನವಾಗಬೇಕಿದೆ.

ಜನರ ನಡುವೆ, ರಾಜ್ಯಗಳ ನಡುವೆ, ದೇಶಗಳ ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ಅದನ್ನು ಶಮನಗೊಳಿಸುವ ಗಾಂಧಿಯವರ ಅಹಿಂಸಾ ತತ್ವಕ್ಕೆ ಒತ್ತು ನೀಡಬೇಕು. ಶಾಂತಿ, ಸುಸ್ಥಿರತೆ ಮೂಲಕ ಗಾಂಧಿಯವರ ದೃಷ್ಟಿಕೋನವನ್ನು ಅಳವಡಿಸಿಕೊಂಡು ಈ ಮೂಲಕ ಜಗತ್ತನ್ನು ವಾಸಯೋಗ್ಯವಾಗಿಸಬೇಕಿದೆ.

**–ಜೂಲಿಯಾ ಓಯಿನಂ**, ಪ್ರಾಧ್ಯಾಪಕಿ, ಕ್ರೈಸ್ಟ್ ವಿಶ್ವವಿದ್ಯಾಲಯ